# ಅನ್ನದಾನ ಮಹಿಮಾ ಸುಳಾದಿ

–ಧ್ರುವತಾಳ–

ಉತ್ತಮರಿಗೆ ಒಂದು ತುತ್ತನ್ನ ದಾನದಿಂದ ।
ಇತ್ತವನ ಹತ್ತು ಹೆತ್ತು ಬಂದು ।
ಸಪುತ ಗೋತ್ರಾಕಿಲ ಹತ್ತಿ ಹೊಂದಿದವರು ।
ಸುತ್ತಣ ಪರಿವಾರ ಎತ್ತಲೆತ್ತ ಉಳ್ಳವರು ।
ಅತ್ಯಂತವಾದ ಪಾಪವೊತ್ತದಾಸಕ್ತರಾಗಿ ।
ಮರ್ತ್ಯಲೋಕದಲಿ ಆಪತ್ತು ಬಡುತಲಿರೆದೆ ।
ಹೆತ್ತ ಜನನಿಯಂತೆ ಎತ್ತಿಕೊಂಡೊಯ್ದು, ಪುನರಾ ।
ವರ್ತಿ ಇಲ್ಲದ, ಲೋಕದತ್ತ ಸೇರಿಸುವುದು ।
ಎತ್ತಲೂ ಸರಿಗಾಣದೆ ಕ್ಷುದಾತುರರಾಗಿ ಬಂದ ।
ಸೋತ್ತಮರಿಗಿತ್ತ ಫಲ ಚಿತ್ತದಲ್ಲಿ ಎಣಿಸೆ ।
ನಿತ್ಯ ಕರುಣವ ಪಡೆದು ಸತ್ಪಥ ನಡೆಯುವರು ॥ ೧ ॥

–ಮಟ್ಟತಾಳ–

ಹರಿಸರ್ವೋತ್ತಮನೆಂಬೋ ಜ್ಞಾನ ।
ಮರುತದೇವನ ಮತವೆಂಬೋ ಮತದಿ ।
ಹರಿಗುರು ಭಕುತಿ ಎಂಬೋ ಭಕುತಿ ನಿರಂತರದಲ್ಲಿ ।
ವಿರಕುತರಾಗಿ ಚರಿಸುವ ಜ್ಞಾನಿಗಳ ಸಂಗದಲ್ಲಿ ।
ಹರಿ ಕಥಾ ಶ್ರವಣ ನಿರುಮಲ ಮನದಿ, ಎರೆಗುತಲಿಪ್ಪಾ ।
ಚರಣೆಯ ಮಾನವನು ಧರೆಯೊಳಗವನೆ ಪರಮೋತ್ತಮನೋ ।
ಅರಿದೀಪರಿಯಲ್ಲಿ ವಿಜಯವಿಟ್ಠಲ ಹರಿಯೆ ।
ಶರಣಾಗಲಿಬೇಕು ತಾರತಮ್ಯವ ತಿಳಿದು ॥ ೨ ॥

–ತ್ರಿವಿಡಿತಾಳ–

ಬಂದ ಅತಿಥಿಯನು ತನ್ನಯ ಬಾಗಿಲ ।
ಮುಂದೆ ಕಾಣುತ್ತಲಿವೆ ಎಂದು ಎದಿರುಗೊಂಡು ।

ವಂದಿಸಿ ಕರ ಮುಗಿದು ದ್ವಂದ್ವ ಪಾದಕ್ಕೆರಗಿ ।
ತಂದೆ, ಆವಲ್ಲಿಂದ ದಯಮಾಡಿ ಬಂದಿರಿ ಎಂದು ।
ಒಂದೊಂದು ಮಾತನು ಆನಂದದಿಂದಲಿ ಪೇಳಿ ।
ರೆಂದು ಪೀಠವನಿತ್ತು ಚಂದದಿಂದಲಿ ನಲಿದು ।
ಮಂದಿರದೊಳಗೆ ವಸುಂಧರ ವಿಬುಧನ್ನ ।
ಮಂದಹಾಸದಲಿ ನಯದಿಂದ ಕುಳ್ಳಿರಿಸಿ, ಜಲ ।
ದಿಂದ ಚರಣ ತೊಳಿದಾನಂದ ಭರಿತನಾಗಿ ।
ಸಂದೇಹ ಬಿಟ್ಟು ಸೊಬಗಿನಿಂದ ಶಿರದ ಮೇಲೆ ।
ಬಿಂದು ಮಾತುರ ಜಲ, ಬಂಧು ಬಳಗ ಕೂಡಿ ।
ಕುಂದರೆ ಧರಿಸಿ ತಾ ಮಂದಿರದಲ್ಲಿ ಚೆಲ್ಲಿ ।
ಒಂದೊಂದು ಪರಿಯಲ್ಲಿ ಪೊಂದಿ ಸುಖದಲ್ಲಿರು ।
ಮಂದರಧರ ನಮ್ಮ ವಿಜಯವಿಟ್ಠಲ ಹರಿಯೆ ।
ಎಂದೆಂದಿಗೂ ಬಿಡದೆ ವಂದಿಸು ಮನದಲ್ಲಿ ॥ ೩ ॥

–ಅಟ್ಟತಾಳ–

ಜೀವೇಶರೊಂದೊಂದು ಪೇಳುವ ಪಾಪಿಗೆ ।
ಶ್ರೀವೈಷ್ಣವೋತ್ತಮನು, ಕರೆದು ತುತ್ತನ್ನವ ।
ಪಾವನನಾಗುವೆನೆಂದು ಇತ್ತರೆ, ಅದು ।
ಪಾವಕನೊಳು ಹಾಕಿದಂತೆ ಬಯಲಾಗಿ ।
ಯಾವತ್ತೂ ಪುಣ್ಯವು ನಾಶವಾಗುವುದು ।
ಆವಾವ ಕಾಲಕ್ಕೆ ಯಳ್ಳನಿತು ಕಾಣೆ ।
ದೇವೇಶ ವಿಜಯವಿಟ್ಠಲ ಜಗದೊಡೆಯನಾ
ಈವನೇತ್ರನ ಪದ ತಾವರೆ ಭಜಿಪಂಗೆ ।
ಕೋವಿದನಾಗಿ ಇತ್ತವಗೆ ಸರಿಗಾಣೇ ॥ ೪ ॥

–ಆದಿತಾಳ–

ಅನ್ನ ಇತ್ತರೆ ಅದು ಭವನವಾಗಿ ತೋರುವುದು ।
ಅನ್ನವೀಯದಿರೆ ಅದು ಕಾನನಕೆ ಸರಿ ಎನ್ನಿ ।
ಅನ್ನದಿಂದಲಿ, ಬಂದ ಘನದುರಿತಹರ ಕಾಣೋ ।
ಅನ್ನದಿಂದಲಿ, ಸರ್ವಪುಣ್ಯ ಫಲಿಸುವುದು ।

ಅನ್ನ ಇತ್ತವನೆ ಕೀರ್ತಿ ಉನ್ನತವಾಗಿ, ತ್ರಿಭು ।
ವನದೊಳಗೆ ತುಂಬಿ ಚೆನ್ನಾಗಿ ಪೊಳೆವನಯ್ಯ ।
ಅನ್ನದಾನಕ್ಕಿಂತ ಇನ್ನು ಮಿಗಿಲು ದಾನಗಳಿಲ್ಲ ।
ಹೊನ್ನು ಹಣ ಕೊಡಲು ಅಗಣ್ಯ ಅನ್ನದಾನಕ್ಕೆ ।
ಅನಂತಕಾಲ ಮುಖವನ್ನೆ ಮಾಡಲು ವಿಪ್ರ ।
ಗುಣಿಸುದುದಕ್ಕೆ ಸರಿಯೆನ್ನ ಬಹುದೇ ತಿಳಿದು ।
ಅನಂತ ಮೂರುತಿ ವಿಜಯವಿಟ್ಠಲರೇಯ ।
ಅನ್ನವನೀವನೆಂದು ಮನ್ನಿಸಿ ಸಲಹುವ ॥ ೫ ॥

**–ಜತೆ–**

ಅತಿಥಿ ಅಭ್ಯಾಗತನ ಸಂತೋಷ ಪಡಿಸಲು ।
ಸತತ ಪೊಳೆವ ವಿಜಯವಿಟ್ಠಲ ಮನಸಿನೊಳು ॥ ೬ ॥